
ಜಗತ್ತನ್ನೇ ಮರೆತರು.

ಆ ಮೇ ಲೆ , ಮಹಡಿಯ ಮೇಲಿನ ಎಲ್ಲ ರಾತ್ರಿಗಳು ಕಾ ಮಾ ಗ್ನಿ ಯಿ ಂ ದ ಧಗಧಗಿಸುತ್ತಿದ್ದವು.

ಮುಂದಿನ ತಿಂಗಳು ಅತ್ತೆ ಹೊರಗೆ ಕೂಡಲಿಲ್ಲ. ತಾಯಿಗೆ ಆಕೆಯ ಹಾವಭಾವ ಹಾಗೂ ನಡತೆಯಿಂದ ಆಕೆಯ ಮೇಲೆ ಸಂಶಯ ಬಂದಿತ್ತು. ಹೆಣ್ಣೆಲ್ಲವೇ! ಒಂದೇ ಸಮ ಬಿಟ್ಟು ಬಿಡದೆ ಬೆನ್ನು ಹತ್ತಿ ಅತ್ತೆಗೆ ಕೇಳಿದಾಗ ಸತ್ಯ ಸಂಗತಿ ಹೊರಗೆ ಬಂದಿತು. ತಾಯಿ ತಲೆಗೆ ಕೈ ಹಚ್ಚಿಕೊಂಡು ಕೆಳಗೆ ಕುಸಿದು ಬಿದ್ದಳು. ದಾದಾ, ಬಾಳೆಗಿಡದ ದಿಂಡಿನಿಂದ ಮೈಯೆಲ್ಲ ಬಾವು ಬರುವ ಹಾಗೆ ರಘುವಿಗೆ ಸಿಕ್ಕಾಪಟ್ಟೆ ಹೊಡೆದ. ಅತ್ತೆಯನ್ನು ತೋಟದ ಮನೆಗೆ ಕಳಿಸಲಾಯಿತು. ಓರ್ವ ಸೂಲಗಿತ್ತಿಯನ್ನು ಕರಿಸಲಾಯಿತು. ಯಾವದೇ ಗುಲ್ಲು, ಬೊಬ್ಬಾಟವಿಲ್ಲದೆ ಅತ್ತೆಗೆ ಗರ್ಭಪಾತ ಮಾಡಿಸಲಾಯಿತು. ಮುಂದೆ ಅನೇಕ ದಿನಗಳ ಕಾಲ ಅತ್ತೆ ಅನಾರೋಗ್ಯದಿಂದ ಬಳಲುತ್ತಿದ್ದಳು. ಆ ತೋಟದ ಮನೆಯಿಂದ ಆಕೆ ಮರಳಿ ಮನೆಗೆ ಬರಲಿಲ್ಲ.



ಈ ಘಟನೆಯಿಂದ ಮನೆಯ ಜನರಿಗೆ ರಘುನ ಧ್ವನಿ ಮಾತ್ರ ಹೆಂಗಸಿನಂತೆ ಇದೆ, ಅವನ ದೇಹದಲ್ಲಿ ಯಾವುದೇ ನ್ಯೂನತೆ ಇಲ್ಲ ಎಂಬುದು ತಿಳಿಯಿತು.

ದಾದಾ, ರಘುನನ್ನು ಮುಂಬೈಯಲ್ಲಿದ್ದ ತನ್ನ ತಮ್ಮನ ಕಡೆಗೆ ಕಳಿಸಿದ. ರಘುವಿನ ಧ್ವನಿಯ ಉಪಚಾರದ ಕುರಿತು ಆತನ ಕಕ್ಕ ವೈದ್ಯರನ್ನು ಸಂಪರ್ಕಿಸಿದ. ರಘುವನ್ನು ಪರೀಕ್ಷೆ ಮಾಡಿದ ಡಾಕ್ಟರು ಹೀಗೆ ಹೇಳಿದರು: "ಹುಡುಗರು ಕಿಶೋರ ಅವಸ್ಥೆ ತಲುಪಿದಾಗ, ಹೀಗೆ ಧ್ವನಿಯ ಸಮಸ್ಯೆ ಉಂಟಾಗುವುದು ಸ್ವಾಭಾವಿಕವೂ ಅಹಜವೂ ಆಗಿದೆ. ಆದರೆ, ಇದನ್ನು ಶರೀರದ ಲೋಪ, ದೋಷ ಎಂದು ಎಂದಿಗೂ ತಿಳಿಯಬಾರದು."

ತಜ್ಞ ವೈದ್ಯರ ಚಿಕಿತ್ಸೆ ಮತ್ತು ಉಪಚಾರದಿಂದ ರಘುವಿನ ಧ್ವನಿಯಲ್ಲಿ ಮಾರ್ಪಾಡು ಆಯಿತು. ಈಗ ಅದರಲ್ಲಿ ಪುರುಷತ್ವ ಕಂಡು ಬರಲಾರಂಭಿಸಿತು. ಮುಂದೆ ಅವನ ಶಿಕ್ಷಣ, ನೌಕರಿ, ಮದುವೆ, ಫ್ಲ್ಯಾಟು ಎಲ್ಲವೂ ಮುಂಬೈಯಲ್ಲಿಯೇ ಆದವು.